# IN THE COURT OF THE ADDL. SENIOR CIVIL JUDGE & JMFC., GUBBI

# **OS – 26/2025**

Witness present and duly sworn on : 07.01.2026.

Cross Examination: by Counsel for Defendant No.2, 4 to 6 :

ಈ ದಾವೆಯನ್ನು ನಮ್ಮ ಜಮೀನಿಗೆ ತೊಂದರೆ ಕೊಟ್ಟ ಕಾರಣ ಸಲ್ಲಿಸಿರುತ್ತೇನೆ. ರಂಗಯ್ಯ, ಬೀರಯ್ಯ ಮತ್ತು ಅವರ ಸಹಚರರು ತೊಂದರೆ ಕೊಟ್ಟಿದ್ದಾರೆ. ಸಹಚರರ ಹೆಸರು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಸರ್ವೆ ನಂ.16/12. ಸರ್ವೆ ನಂ.16/12 ಮೂಲತಹ ಮಲ್ಲಯ್ಯ ರವರಿಗೆ ಸೇರಿತ್ತು. ಸಾಕ್ಷಿ ಮುಂದುವರೆದು ದಿನಾಂಕಃ 04.12.1967 ರಂದು ನನ್ನ ತಾತ ಮುದ್ದೇಗೌಡ @ ಮುದ್ದಯ್ಯ ರವರು ಖರೀದಿ ಮಾಡಿದ್ದರು. ನನ್ನ ತಾತ ಖರೀದಿ ಮಾಡುವ ದಾಖಲೆಯಲ್ಲಿ ಸರ್ವೆ ನಂ.16/2 ಎಂದು ನಮೂದು ಇದೆ ಎಂದರೆ ಇರಬಹುದು. ಸಾಕ್ಷಿ ಮುಂದುವರೆದು ಕೈ ತಪ್ಪಿನಿಂದ ಸರ್ವೆ ನಂ.16/2 ಎಂದು ನಮೂದು ಆಗಿದೆ. ಸರ್ವೆ ನಂ.16/12 ಕ್ಕೆ ಸಂಭಂದಿಸಿದಂತೆ 1967 ರಿಂದ ಇಲ್ಲಿಯವರೆಗೆ ಕೈ ತಪ್ಪಿನಿಂದ ಸರ್ವೆ ನಂಬರ್ ನಮೂದು ಆಗಿದೆ ಎಂದು ದಾವೆ ಸಲ್ಲಿಸಿಲ್ಲ. ಸುಮಾರು 60-67 ವರ್ಷಗಳಾಗಿವೆ ಎಂದರೆ ಸರಿ. ಸುಮಾರು 67 ವರ್ಷಗಳು ಆಗಿರುವ ಕಾರಣ ದಾವೆ ಸಲ್ಲಿಸಲು ಸಕಾರಣ ಇಲ್ಲ ಎಂದರೆ ಸರಿಯಲ್ಲ.

ನನಗೆ 2 ರಿಂದ 6 ನೇ ಪ್ರತಿವಾದಿಗಳಾದಾ ಗುಜ್ಜಪ್ಪ, ಹನುಮಂತರಾಯಪ್ಪ, ಗಂಗಣ್ಣ, ಗುಡ್ಡಯ್ಯ, ಶಿವಣ್ಣ ಗೊತ್ತಿದ್ದಾರೆ. ಅವರ ತಾತ ರವರಾದ ಗಂಗೇಗೌಡ ಬಿನ್ ಬಸವೇಗೌಡ ರವರು ನನಗೆ ಗೊತ್ತಿಲ್ಲ. ಅವರ ಬಗ್ಗೆ ನಾನು ತಿಳಿದುಕೊಂಡಿಲ್ಲ. ಸದರಿ ಗಂಗೇಗೌಡ ರವರು ದಿನಾಂಕಃ 02.06.1947 ರಂದು ಸರ್ವೆ ನಂ.16/3 ರಲ್ಲಿ 26 ಗುಂಟೆ ಜಮೀನು ಖರೀದಿ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಖರೀದಿಯ ನಂತರ ಅವರ ಹೆಸರಿಗೆ ದಾಖಲೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಗಂಗೇಗೌಡ ರವರ ಮರಣದ ನಂತರ 2 ರಿಂದ 6 ನೇ ಪ್ರತಿವಾದಿಗಳ ಹೆಸರಿಗೆ ಜಂಟಿ ಖಾತೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.16/3 ಯಾರಿಗೆ ಸೇರಿದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸರ್ವೆ ನಂ.16/12 ರಲ್ಲಿ ಇದ್ದೇವೆ ಮತ್ತು ನಮಗೆ ತೊಂದರೆ ಕೊಟ್ಟ ಕಾರಣ ದಾವೆ ಸಲ್ಲಿಸಿದ್ದೇವೆ. ಸರ್ವೆ ನಂ.16/3 ರಲ್ಲಿ 26 ಗುಂಟೆ ಗಂಗೇಗೌಡರವರಿಗೆ ಸೇರಿದ್ದು, ಅವರ ಮರಣದ ನಂತರ ಸದರಿ ಜಮೀನು

2 ರಿಂದ 6 ನೇ ಪ್ರತಿವಾದಿಗಳ ಮಾಲೀಕತ್ವದಲಿ ಇದೆ ಎಂದರೆ ನನಗೆ ಗೊತ್ತಿಲ್ಲ. 2 ರಿಂದ 6 ನೇ ಪ್ರತಿವಾದಿಗಳು ವಿಭಾಗ ಪತ್ರ ಮಾಡಿಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಅದರ ನಂತರ ಅವರ ಹೆಸರಿಗೆ MR ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗದಲ್ಲಿ ಸರ್ವೆ ನಂ.16/3 ರಲ್ಲಿ 2 ನೇ ಪ್ರತಿವಾದಿಗೆ 6 ಗುಂಟೆ ಮತ್ತು 5 ನೇ ಪ್ರತಿವಾದಿಗೆ 20 ಗುಂಟೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. 2 ಮತ್ತು 5 ನೇ ಪ್ರತಿವಾದಿಗಳು ಸರ್ವೆ ನಂ.16/3 ರ ಮಾಲೀಕತ್ವದಲ್ಲಿ ಅನುಭವಿಸಿಕೂಂಡು ಬರುತ್ತಿದ್ದಾರೆಂದರೆ ನನಗೆ ಗೊತ್ತಿಲ್ಲ.

7 ನೇ ಪ್ರತಿವಾದಿ ಬೀರಯ್ಯ ರವರು ಸರ್ವೆ ನಂ.16/2 ಜಮೀನನ್ನು ಖರೀದಿ ಮಾಡಿದರು ಎಂದರೆ ಸರಿಯಲ್ಲ. ಖರೀದಿಯ ನಂತರ ಅವರ ಹೆಸರಿಗೆ ಖಾತೆ ಪಹಣಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.16/2 ರ ಪೂರ್ವಕ್ಕೆ ಸರ್ಕಾರಿ ಜಮೀನು, ಪಶ್ಚಿಮಕ್ಕೆ ಗಂಗೇಗೌಡರವರ ಜಮೀನು, ಉತ್ತರಕ್ಕೆ ಕಣ್ಣಮ್ಮ ರವರ ಜಮೀನು, ದಕ್ಷಿಣಕ್ಕೆ ಗಂಗೇಗೌಡರವರ ಜಮೀನು ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯು ಸರ್ವೆ ನಂ.16/2 ರ ಸ್ವಾಧೀನದಲ್ಲಿ ಇದ್ದಾರೆ ಎದಂರೆ ಸರಿಯಲ್ಲ. ಸಾಕ್ಷಿ ಮುಂದುವರೆದು ರಂಗಯ್ಯ ರವರು ಸ್ವಾಧೀನದಲ್ಲಿ ಇದ್ದಾರೆ. 7 ನೇ ಪ್ರತಿವಾದಿಯು 2 ರಿಂದ 6 ನೇ ಪ್ರತಿವಾದಿಗಳಿಗೆ ತಿಳಿಯದೆ ಸರ್ವೆ ನಂ.16/3 ರಲ್ಲಿ 20 ಗುಂಟೆ ಜಮೀನನ್ನು ಅವರ ಹೆಸರಿಗೆ ಖಾತೆ ಪಹಣಿ ಮಾಡಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. 2 ರಿಂದ 6 ನೇ ಪ್ರತಿವಾದಿಗಳು ನಮ್ಮ ಜಮೀನಿಗೆ ತೊಂದರೆ ಕೊಟ್ಟಿಲ್ಲ ಮತ್ತು ನಮ್ಮ ಜಮೀನು ಸರ್ವೆ ನಂ.16/2 ಎಂದರೆ ಸರಿಯಲ್ಲ.

ನನ್ನ ಸಾಕ್ಷಿ ಪ್ರಮಾಣ ಪತ್ರದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಸರ್ವೆ ನಂ.16/2 ಜಮೀನಿನ ದಾಖಲೆಗಳನ್ನು ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ.

**Cross Examination: by Counsel for Defendant No.7 :**

Deferred as counsel prays time.

(Typed to my dictation in open court)

R.O.I & A.C.

Addl. Senior Civil Judge and
JMFC., Gubbi